ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಬಳ್ಳಾರಿ ತಾಲ್ಲೂಕು, ಕುಡುತಿನಿ ಮತ್ತು ಹರಗಿದೋಣಿ ಗ್ರಾಮಗಳಲ್ಲಿ 4000-00 ಎಕರೆ ಜಮೀನನ್ನು ಸ್ವಾಧೀನಪಡಿಸಿ ಕೊಳ್ಳಲಾಗುವುದು.

ಇ) ಇಲ್ಲ. ಖಾಸಗಿ ಜಮೀನನ್ನು ಸಹ ಸ್ವಾಧೀನಪಡಿಸಿ ಕೊಳ್ಳಲಾಗುತ್ತಿದೆ.

ಈ) ಪ್ರಾಥಮಿಕ ಅಧಿಸೂಚನೆಯಂತೆ, ಕೆ.ಐ.ಎ.ಡಿ. ಕಾಯ್ದೆ ಕಲಂ 28(2)ರಡಿ ಭೂ ಮಾಲೀಕರಿಗೆ ವೈಯಕ್ತಿಕ ನೋಟೀಸ್‌ಗಳನ್ನು ಜಾರಿ ಮಾಡಿ, ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿದೆ.

ಉ) GESCOM ನಿಂದ 20 MW ವಿದ್ಯುತ್ ಸರಬರಾಜಿಗೆ ಮತ್ತು 40 MGD ನೀರು ಸರಬರಾಜನ್ನು ಹತ್ತಿರದ ತುಂಗಭದ್ರಾ ಜಲಾಶಯ / ಆಲಮಟ್ಟಿ ಜಲಾಶಯದಿಂದ ಒದಗಿಸಲು ನಿರ್ಣಯಿಸಲಾಗಿದೆ.

ಮೈಸೂರು ಲ್ಯಾಂಪ್ ವರ್ಕ್ಸ್

678 (266) ಶ್ರೀ ರಾಮಲಿಂಗಾರೆಡ್ಡಿ. (ಬಿ.ಟಿ.ಎಂ. ಲೇಔಟ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಮೈಸೂರು ಲ್ಯಾಂಪ್ ವರ್ಕ್ಸ್ ರೋಗಗ್ರಸ್ತ ವಾಗಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇ) ಸರ್ಕಾರಿ ಸ್ವಾಮ್ಯದ ಈ ಕೈಗಾರಿಕೆಯ ಒಡೆತನದಲ್ಲಿರುವ ಜಮೀನು ಎಷ್ಟು;

ಈ) ಈ ಜಮೀನನ್ನು ಮಾರಾಟ ಮಾಡಲು ಸರ್ಕಾರ ನಿರ್ಧರಿಸಿದೆಯೇ ಹಾಗೂ ಜಮೀನಿನ ಅಂದಾಜು ಮೌಲ್ಯವೆಷ್ಟು;

ಉ) ಈ ಜಮೀನನ್ನು ಖಾಸಗಿಯವರಿಗೆ ಮಾರಾಟ ಮಾಡದೆ ರಾಜ್ಯ ಸಾರ್ವಜನಿಕ ಉದ್ದಿಮೆಗೆ ಮಾರಾಟ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ಸಂಸ್ಥೆಯು ರೋಗಗ್ರಸ್ಥವಾಗಲು ಕಾರಣಗಳು ಈ ಕೆಳಕಂಡಂತಿವೆ:

1. ಹಳೆಯ ಯಂತ್ರೋಪಕರಣಗಳು
2. ರೂಢಿಯಲ್ಲಿಲ್ಲದ ತಂತ್ರವಿಜ್ಞಾನ
3. ಮಿತಿಮೀರಿದ ನೌಕರರ ಸಂಖ್ಯೆ
4. ಹೆಚ್ಚಾದ ಕಚ್ಚಾ ಪದಾರ್ಥಗಳ ಬೆಲೆ ಹಾಗೂ ಮೇಲ್ವೆಚ್ಚ
5. ಮಾರುಕಟ್ಟೆಯಲ್ಲಿನ ತೀವ್ರ ಪೈಪೋಟಿ
6. ಕಾರ್ಯನಿರ್ವಹಣೆಯ ಹಣದ ತೀವ್ರ ಕೊರತೆ

ಇ) 21 ಎಕರೆ 09 ಗುಂಟೆ.

ಈ) ಈ ಪೈಕಿ 9 ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ನೀಡುವ ಪ್ರಸ್ತಾವನೆ ಇದೆ. ಉಳಿದ ಜಮೀನಿನ ಬಗ್ಗೆ ಅಂತಿಮ ನಿರ್ಧಾರ ಆಗಿರುವುದಿಲ್ಲ.

ಉ) ಪ್ರಸ್ತುತ ನೋಂದಣಿ ಇಲಾಖೆಯ ಮಾರ್ಗಸೂಚಿ ದರದ ಅನ್ವಯ ಸಂಸ್ಥೆಯ ಒಟ್ಟು ಜಮೀನಿನ ಬೆಲೆ ರೂ.346.71 ಕೋಟಿಗಳು.

ಡಾ॥ ನಂಜುಂಡಪ್ಪ ವರದಿ ಅನುಷ್ಠಾನ

679 (267) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾದೇಶಿಕ ಅಸಮತೋಲನ ನಿವಾರಿಸಲು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸರ್ಕಾರ ನರಜುಂಡಪ್ಪ ವರದಿ ಅನುಷ್ಠಾನ ಸಮಿತಿಯನ್ನು ರಚಿಸಿದೆಯೇ;

ಆ) ಹಾಗಿದ್ದಲ್ಲಿ, ಸಮಿತಿಯನ್ನು ಯಾವಾಗ ರಚಿಸಲಾಯಿತು;

ಇ) ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ ನೀಡುವುದು;